ಗ್ರಾನೈಟ್ ಬಗ್ಗೆ ಬೋಗಸ್ ಪರ್ಮಿಟ್ ನೀಡಿರುವ ಬಗ್ಗೆ

ಶ್ರೀ ಕೆ.ಎನ್. ಈಶ್ವರಪ್ಪ : ಬೆಳಿಗ್ಗೇನೆ ಕೆ.ಇ.ಬಿ. ಬಗ್ಗೆ.

ಉಪಾಧ್ಯಕ್ಷರು : ತಮ್ಮನ್ನು ಆಮೇಲೆ ಮಾತನಾಡಲು ಕರೆಯುತ್ತೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ನಾನು ಗ್ರಾನೈಟ್ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಸುಮಾರು 400ಬೋಗಸ್ ಪರ್ಮಿಟ್ ಅನ್ನು ಸರ್ಕಾರದವರು ಇಷ್ಯೂ ಮಾಡಿದ್ದಾರೆ ಎನ್ನುವಂತಹ ವಾದ ಇವತ್ತು ನಮ್ಮ ಮುಂದೆ ಇದೆ. ಮತ್ತೆ ಅದರಲ್ಲಿ 20 ಜನರು ಬಹಳ ಪ್ರಭಾವಿ ವ್ಯಕ್ತಿಗಳು ಇದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಯಾರು ಏನು ಹೇಳುತ್ತಾರೆ ಎಂಬುದು ಗೊತ್ತಾಗುತ್ತಿಲ್ಲ. ಅವರು ಏನು ಹೇಳುತ್ತಿದ್ದಾರೆಂಬುದನ್ನು ಕೇಳಿಸಿಕೊಳ್ಳಬಾರದೇ? ಏನು ಆಗುತ್ತಿದೆ ಎಂಬುದೇ ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಿಷಯವಿಷ್ಟೆ, ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ 400 ಬೋಗಸ್ ಪರ್ಮಿಟ್ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ನನಗೆ ಮೊದಲು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಿರಿ. ನಾನು ಮೊದಲು ಮಾತನಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಸಭೆಯನ್ನು 15 ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸಭೆಯ ಕಲಾಪಗಳು ಮಧ್ಯಾಹ್ನ 1.30 ಗಂಟೆಗೆ ಮುಕ್ತಾಯಗೊಂಡು ಮತ್ತೆ 15 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು)

(ಮತ್ತೆ ಸಭೆಯ 2 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು. ಉಪಾಧ್ಯಾಕ್ಷರಾದ ಶ್ರೀ ಎಂ.ಎಸ್ ಪಾಟೀಲ್ ಅವರು ಪೀಠದಲ್ಲಿದ್ದರು).

ಹಕ್ಕುಬಾಧ್ಯತಾ ಸೂಚನೆಗೆ ಸಂಬಂಧಪಟ್ಟಂತೆ

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೆ, ನಿನ್ನೆ ನಾನು ಸದನದ ಕಾರ್ಯಕಲಾಪದಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗಲಿಲ್ಲ. ಅಧ್ಯಕ್ಷರ ಅನುಮತಿಯನ್ನು ಪಡೆದು ದೆಹಲಿಯಲ್ಲಿ ನಡೆದಂಥ ನೀರಾವರಿ ಮಂತ್ರಿಗಳ ಸಭೆಯಲ್ಲಿ ನಾನು ಭಾಗವಹಿಸುವುದಕ್ಕೆ ಹೋಗಬೇಕಾಗಿ ಬಂದ ಕಾರಣ ಆಗಲಿಲ್ಲ. ಪೂರ್ವಭಾವಿಯಾಗಿ ನಡೆದ ಚರ್ಚೆ ಬಗ್ಗೆ ಸದನದ

ಕಲಾಪವನ್ನು ತರಿಸಿ ನೋಡಿದ್ದೇನೆ. ತಮ್ಮ ಮುಖೇನ, ಸದನದ ಎಲ್ಲಾ ಸದಸ್ಯರ ಅಭಿಪ್ರಾಯ ನನಗೆ ಗೊತ್ತಿದೆ. ಈ ಒಂದು ಹಕ್ಕುಬಾಧ್ಯತಾ ಸೂಚನೆ ಸನ್ಮಾನ್ಯ ಸದಸ್ಯರುಗಳಾದ ಶ್ರೀಮಾನ್ ಶ್ರೀರಾಮರೆಡ್ಡಿಯವರು, ನಾಗೇಗೌಡರು, ಮಾನ್ಯ ಖಾರ್ಗೆಯವರು ಮತ್ತು ಶ್ರೀಮಾನ್ ಬಂಗಾರಪ್ಪನವರು ಏನು ಕೊಟ್ಟಿದ್ದಾರೆ ಇದರ ಬಗ್ಗೆ ಸಭೆ ಅಂತಿಮ ನಿರ್ಣಯ ತೆಗೆದುಕೊಳ್ಳುವುದು ಸೂಕ್ತ ಎಂದು ನಾನು ವಿನಂತಿ ಮಾಡಿ ಈ ಸಂದರ್ಭದಲ್ಲಿ ಅಧ್ಯಕ್ಷರ ಮನಸ್ಸಿಗೆ ಏನೇ ನೋವಾಗಿದ್ದರೂ ಎಲ್ಲರೂ ನಾವು ಒಮ್ಮತದಿಂದ ಈ ಸಭೆಗೆ ಬರಬೇಕೆಂದು ಅವರನ್ನು ವಿನಂತಿ ಮಾಡಿಕೊಂಡು, ಅವರು ಬಂದು ಇದರ ಬಗ್ಗೆ ಅಂತಿಮ ನಿರ್ಣಯ ತೆಗೆದುಕೊಂಡು ಸಭೆಯ ಕಾರ್ಯಕಲಾಪ ನಡೆಸಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮ ಮುಖೇನ ಸಭೆ ಮುಖೇನ ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಒಂದು ಐದು ನಿಮಿಷ ಸಭೆಯನ್ನು ಮುಂದೂಡಿ ಅವರು ಬರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ :(ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಸಭಾ ನಾಯಕರು ಬಹಳ ಸಮಯೋಚಿತವಾಗಿ ಕೆಲವು ವಿಚಾರಗಳನ್ನು ಮಂಡಿಸಿದರು. ನಾನು ಅದನ್ನು ಸ್ವಾಗತಿಸುತ್ತೇನೆ. ಈ ಸಂದರ್ಭದಲ್ಲಿ ನಾನು ಎಲ್ಲಾ ವಿರೋಧಪಕ್ಷಗಳ ಪರವಾಗಿ ಮತ್ತು ವಿರೋಧಪಕ್ಷಗಳ ಮುಖಂಡರುಗಳ ಪರವಾಗಿ ಮಾನ್ಯ ಅಧ್ಯಕ್ಷರಾದ ಶ್ರೀ ರಮೇಶ್ ಕುಮಾರ್ ಅವರನ್ನು ತಾವು ಬಂದು ಮತ್ತೆ ಸದನದಲ್ಲಿ ಅಧ್ಯಕ್ಷತೆ ವಹಿಸಿ ಕಾರ್ಯಕಲಾಪಗಳನ್ನು ನಡೆಸಿಕೊಡಬೇಕೆಂದು ನಮ್ಮೆಲ್ಲರಪರವಾಗಿ ಅವರನ್ನು ಅತ್ಯಂತ ಕಳಕಳಿಯಿಂದ ವಿನಯದಿಂದ ಗಂಭೀರವಾಗಿ, ಪ್ರಾಮಾಣಿಕವಾಗಿ, ಆ ನೋವನ್ನು ಮರೆಯಬೇಕು ಎಂದು ಅವರಲ್ಲಿ ನಾವೆಲ್ಲರೂ, ಸಂಪೂರ್ಣವಾಗಿ ಎಲ್ಲಾ ವಿರೋಧ ಪಕ್ಷದವರೂ ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತಿದ್ದೇವೆ. ಅವರು ಬರಬೇಕು. ಮತ್ತು ಈ ಒಂದು ಹಕ್ಕುಬಾಧ್ಯತಾ ನಿರ್ಣಯದ ಬಗ್ಗೆ ಈಗಾಗಲೇ ಇದರ ಮಂಡನೆಗೆ ಮುಂಚೆ ಹಕ್ಕುಬಾಧ್ಯತಾ ನಿರ್ಣಯ ಮಂಡಿಸಿರತಕ್ಕ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ಇದರ ಹಿಂದೆ ನಾನು ಬಹಳ ಆಶಾವಾದಿ ಎಂದು ತಮಗೆ ಮೊದಲೇ ತಿಳಿಸಿದ್ದೆ. ಇದು ಯಾವುದಾದರೂ ರೂಪದಲ್ಲಿ ಅಂತ್ಯ ಆಗಬೇಕು. ಎಂಬುದು ನನ್ನ ಅತ್ಯಂತ ಬಯಕೆ. ಎಲ್ಲಾ ವಿರೋಧಪಕ್ಷದ ಮುಖಂಡರುಗಳ ಇಚ್ಛೆಯೂ ಅದೇ ಆಗಿದೆ. ಈ ಒಂದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದು ಅನಿವಾರ್ಯ ಎನ್ನತಕ್ಕದ್ದನ್ನು ಒಪ್ಪಬೇಕಾಗುತ್ತದೆ. ಈಗಾಗಲೇ ಇವತ್ತು ತಮ್ಮ ಕೊಠಡಿಯಲ್ಲಿ ಎಲ್ಲಾ ವಿರೋಧಪಕ್ಷಗಳ ಮುಖಂಡರುಗಳು ಮತ್ತು ಸಭಾ ನಾಯಕರೂ ಸೇರಿ ಈ ವಾತಾವರಣವನ್ನು ತಿಳಿಗೊಳಿಸಬೇಕು ಮತ್ತು ಸಭೆಯ ಘನತೆಯನ್ನು ಎತ್ತಿಹಿಡಿಯಬೇಕು, ಅಧ್ಯಕ್ಷರ ಘನತೆ ಗೌರವವನ್ನು ಕಾಪಾಡಬೇಕು ಎಂಬ ದೃಷ್ಟಿಯಲ್ಲಿ ಒಂದು ಚಿಂತನ ನಡೆಸಿ ಒಂದು ನಿರ್ಧಾರಕ್ಕೆ ಬಂದಿರತಕ್ಕದ್ದು ನನಗಂತೂ ಬಹಳ, ಸಂತೋಷವಾಗಿದೆ. ನಾನು ಸಂತೋಷ ಪಡುವುದರಲ್ಲಿ ಮೊದಲನೆಯವನು, ಮೊದಲು ನಾನು ವಿಫಲಸಾದನೇನೋ ಎಂಬ ರೀತಿ ಮನಸ್ಸಿಗೆ ನೋವಾಗಿತ್ತು. ಆದರೆ ಇವತ್ತು ಸಫಲವಾಗಿದೆ ಎಂದು ನಾನು ಬಹಳ ಸಂತೋಷಪಡುತ್ತಿದ್ದೇನೆ. ಸಾಮಾನ್ಯವಾಗಿ ನಿನ್ನೆ ಮೊನ್ನೆ ಸರ್ವಪ್ರಯತ್ನ ಪಟ್ಟು ವಿರೋಧಪಕ್ಷದ ನಾಯಕರ ಕೊಠಡಿಗೆ ಹೋಗಿ, ಅವರನ್ನು ಭೇಟಿ ಮಾಡಿ, ಮಿಕ್ಕ ಎಲ್ಲಾ ಮುಖಂಡರುಗಳನ್ನು ಭೇಟಿ ಮಾಡಿದನಂತರ ಒಂದು ಹೊಸ ವಾತಾವರಣ

ನಿರ್ಮಾಣವಾಗಿದೆ. ಅದಕ್ಕೆ ನನಗಂತೂ ಬಹಳ ಸಂತೋಷವಾಗಿದೆ. ಆ ದೃಷ್ಟಿಯಲ್ಲಿ ಮತ್ತೊಮ್ಮೆ ನಾನು ಮಾನ್ಯ ಅಧ್ಯಕ್ಷರಿಗೆ ಮನವಿ ಮಾಡುತ್ತೇನೆ. ಈ ಪೀಠವನ್ನು ಅವರು ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಅವರ ಬಗ್ಗೆ ನಮಗೆ, ಸದನದಲ್ಲಿರತಕ್ಕ ಎಲ್ಲಾ ಮುಖಂಡರುಗಳು, ಎಲ್ಲಾ ಪಕ್ಷದವರು ಬಹಳ ಗೌರವವನ್ನು ಸೂಚಿಸುತ್ತೇವೆ. ಅವರು ದಯಮಾಡಿ ಈ ಒಂದು ಸದನದ ಕಲಾಪವನ್ನು ನಡೆಸಿಕೊಡುವುದಕ್ಕೆ ಬರಬೇಕು. ಬಂದು ಹಕ್ಕುಬಾಧ್ಯತಾ ನಿರ್ಣಯದ ಬಗ್ಗೆ ಏನು ಚರ್ಚೆ ನಡೆದಿದೆ ಅದು ಒಂದು ಅಂತಿಮ ಘಟ್ಟಕ್ಕೆ ಬರುವ ಸೂಚನೆ ಇರುವುದರಿಂದ ಅದರ ಬಗ್ಗೆಯೂ ತೀರ್ಪನ್ನು ನೀಡಿ ಮತ್ತೆ ಈ ಸದನ ಸುಗಮವಾಗಿ ನಡೆಯತಕ್ಕ ಒಂದು ಹಾದಿಯನ್ನು ಅವರು ಮಾಡಿಕೊಡಬೇಕು ಎಂದು ತಮ್ಮ ಮೂಲಕ ಕಳಕಳಿಯಿಂದ ನಾನು ಮನವಿ ಮಾಡುತ್ತಿದ್ದೇನೆ. ನಾನೊಬ್ಬನೇ ಅಲ್ಲ ನಮ್ಮ ಎಲ್ಲಾ ವಿರೋಧಪಕ್ಷಗಳ ಮುಖಂಡರುಗಳ ಪರವಾಗಿ ಮನವಿಯನ್ನು ತಮ್ಮ ಮೂಲಕ ಮಾನ್ಯ ಅಧ್ಯಕ್ಷರಿಗೆ ಸಲ್ಲಿಸುತ್ತಿದ್ದೇನೆ. ಅಧ್ಯಕ್ಷರು ದಯಮಾಡಿಸಬೇಕೆಂದು ಮತ್ತೊಮ್ಮೆ ಅವರನ್ನು ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಅಧ್ಯಕ್ಷರೇ, ಸಭಾನಾಯಕರು ಏನು ಈಗ ಸಲಹೆಯನ್ನು ಅಭಿಪ್ರಾಯವನ್ನು ವ್ಯಕ್ತಪಡಿಸಿ ಸನ್ಮಾನ್ಯ ಅಧ್ಯಕ್ಷರು ಬಂದು ಈ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಿಕೊಡಬೇಕು ಎನ್ನುವಂಥ ಮಾತನ್ನು ಹೇಳಿದ್ದಾರೆ ನಾನೂ ಸಹ ಸನ್ಮಾನ್ಯ ಅಧ್ಯಕ್ಷರಲ್ಲಿ ತಮ್ಮ ಮೂಲಕ ವಿನಂತಿ ಮಾಡುತ್ತಾ ಇದ್ದೇನೆ ಅವರು ಬಂದು ಈ ಸಭಾ ಕಾರ್ಯಕಲಾಪವನ್ನು ನಡೆಸಿಕೊಡಬೇಕು. ಮತ್ತು ಅವರು ಏನು ತೀರ್ಪು ಕೊಡುತ್ತಾರೆ. ಅದಕ್ಕೆ ನಾವೆಲ್ಲಾ ತಲೆಬಾಗುವುದಕ್ಕೆ ಸಿದ್ಧರಿದ್ದೇವೆ. ಮತ್ತೆ ಈ ಸದನದ ಸಂಪ್ರದಾಯಗಳನ್ನು ಎತ್ತಿಹಿಡಿಯುವುದರಲ್ಲಿ ಯಶಸ್ವಿಯಾಗಿ ಕೆಲಸ ಮಾಡುತ್ತಾ ಇರುವಂಥ ಅವರು ಬಂದು ಇಲ್ಲಿ ಕುಳಿತು ಕಾರ್ಯಕ್ರಮಗಳನ್ನು ನಡೆಸಿಕೊಟ್ಟರೆ ಶೋಭೆ ಬರಬಹುದು. ಅದಕ್ಕಾಗಿ ಇಲ್ಲಿ ಕುಳಿತು ಕಾರ್ಯಕ್ರಮಗಳನ್ನು ನಡೆಸಿಕೊಟ್ಟರೆ ಶೋಭೆ ಬರಬಹುದು. ಅದಕ್ಕಾಗಿ ಅವರು ಬಂದು ಕಾರ್ಯಕ್ರಮ ನಡೆಸಿಕೊಡಬೇಕೆಂದು ಎಲ್ಲಾ ಪ್ರತಿಪಕ್ಷದ ನಾಯಕರ ಪರವಾಗಿ ವಿನಂತಿಯನ್ನು ಮಾಡುತ್ತೇನೆ.

(ಶ್ರೀಮತಿ ಪ್ರಮೀಳ ಅವರು ಅಧ್ಯಕ್ಷಪೀಠವನ್ನು ಅಲಂಕರಿಸಿದ್ದರು).

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಸನ್ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ಹೇಳುತ್ತೇನೆ. ಈಗಾಗಲೇ ಈ ಮನೆಯ, ಸದನದ ನಾಯಕರು ಮತ್ತು ಮುಖ್ಯಮಂತ್ರಿಗಳೂ ಆದ ಮಾನ್ಯ ದೇವೇಗೌಡರು ಏನು ಪ್ರಸ್ತಾವನೆಯನ್ನು ಮಂಡಿಸಿದ್ದಾರೆ ಅದಕ್ಕೆ ಎಲ್ಲರ ಬೆಂಬಲ ಕೂಡ ಇದೆ. ಏಕೆಂದರೆ ಈ ಮೂರು ದಿವಸದಲ್ಲಿ ನಿಜವಾಗಿಯೂ ನಮಗೆ ಏನನ್ನಿಸುತ್ತಿದೆ ಎಂದರೆ ಯಾವ ಕಾರ್ಯಕಲಾಪಗಳು ಸುಗಮವಾಗಿ ನಡೆಯಬೇಕಾಗಿತ್ತೋ ಅದನ್ನು ಬಿಟ್ಟು ನಾವು ಕೇವಲ ಇದೊಂದೇ ಇಷ್ಯೂವನ್ನು ತೆಗೆದುಕೊಂಡು ಸಾಕಷ್ಟು ಸಮಯವನ್ನು ಈಗಾಗಲೇ ಹರಣ ಮಾಡಿದ್ದೇವೆ. ಇನ್ನು ಮುಂದೆ ಆ ಸಮಯವನ್ನು ಕಳೆದುಕೊಳ್ಳುವುದು ಬೇಡ. ದೇಶದ ಮತ್ತು ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ನಾವು ಚರ್ಚೆ ಮಾಡುವ ಅವಶ್ಯಕತೆ ಇದೆ. ಅದಕ್ಕಾಗಿ ಮಾನ್ಯ ಸ್ಪೀಕರ್‌ರವರು ಪುನಃ ತಮ್ಮ

ಪೀಠವನ್ನು ಅಲಂಕರಿಸಿ ನಮಗೆ ಮಾರ್ಗದರ್ಶನ ಮಾಡಬೇಕು ಮತ್ತು ಅವರು ಏನು ತೀರ್ಪು ಕೊಡುತ್ತಾರೋ ಅದಕ್ಕೆ ನಾವು ಕೂಡ ಬದ್ಧರಾಗಿದ್ದೇವೆ. ಯಾವ ರೀತಿಯಾಗಿ ವಿರೋಧಪಕ್ಷದ ನಾಯಕರು ಯಡಿಯೂರಪ್ಪನವರು ಹೇಳಿದರು, ನಾಯಕರಾದ ಶ್ರೀ ದೇವೇಗೌಡರು ಹೇಳಿದರು, ಅದೇ ರೀತಿಯಾಗಿ ಶ್ರೀ ವಾಟಾಳ್ ನಾಗರಾಜರವರು ಕೂಡ ಪ್ರಸ್ತಾಪ ಮಾಡಿದ್ದಾರೆ. ಸದನದ ಸದಸ್ಯರುಗಳು ನಾವೆಲ್ಲರೂ ಕೂಡ ಅವರ ತೀರ್ಮಾನಕ್ಕೆ, ತೀರ್ಪಿಗೆ ಬದ್ದರಾಗಿದ್ದೇವೆ. ಅದಕ್ಕಾಗಿ ಅವರು ತಮ್ಮ ಮನಸ್ಸಿನಲ್ಲಿ ಯಾವುದೇ ಒಂದು ಅಳುಕು ಇಟ್ಟುಕೊಳ್ಳದೇ ಪುನಃ ಬಂದು ನಮ್ಮನ್ನು ಮಾರ್ಗದರ್ಶನ ಮಾಡಬೇಕೆಂದು ಹೇಳಿ, ಅದಕ್ಕೆ ನಾವು ಎಲ್ಲರೂ ಕೂಡ ಈ ಸದನದ ಸದಸ್ಯರು ಅವರನ್ನು ಅಪೀಲ್ ಮಾಡಿಕೊಳ್ಳೋಣ, ಬಂದು ಪ್ರಿಸೈಡ್ ಮಾಡಲಿ, ನಮ್ಮನ್ನು ಸರಿಯಾದ ರೀತಿಯಿಂದ ಮಾರ್ಗದರ್ಶನ ಮಾಡಲಿ ಎಂದು ಹೇಳಿ ನಾನು ಕೂಡ ಕೇಳಿಕೊಳ್ಳುತ್ತೇನೆ.

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಉಪಾಧ್ಯಕ್ಷರೇ, ಕಳೆದ 2 ದಿವಸಗಳಿಂದ ನಡೆದಂಥ ಚರ್ಚೆ, ವಾದವಿವಾದ ಇವೆಲ್ಲವುಗಳೂ ಕೂಡ ಒಂದು ಅನಿವಾರ್ಯವಾದಂಥ ಪರಿಸ್ಥಿತಿಯಲ್ಲಿ ಬೆಳೆದಂಥ ವಿಷಯಗಳು. ಇದಕ್ಕಿಂತ ಬಹಳ ಗಂಭೀರವಾದಂಥ ವಿಷಯಗಳು ಈಗಾಗಲೇ ಚರ್ಚೆ ಮಾಡತಕ್ಕಂಥದ್ದು ನಮ್ಮ ಮುಂದೆ ಇವೆ. ಆ ಸಂದರ್ಭದಲ್ಲ ನಾವು ಏನು ಎಲ್ಲಾ ಸೂಚನೆಗಳನ್ನು ಕೊಟ್ಟಿದ್ದೇವೆ. ಆ ಸೂಚನೆಗೆ ನಮ್ಮ ವಾದವನ್ನು ಆಲಿಸಿದಂತಹವರು ಮಾನ್ಯ ಅಧ್ಯಕ್ಷರು. ಅದರ ಬಗ್ಗೆ ಅವರು ತೀರ್ಪು ಕೊಡಬೇಕಾದರೆ ಸನ್ಮಾನ್ಯ ಅಧ್ಯಕ್ಷರೇ ಈ ಪೀಠದಲ್ಲಿ ಕುಳಿತು ತೀರ್ಪನ್ನು ನೀಡಬೇಕು ಎನ್ನತಂಕ್ಕಂಥಾದ್ದು ನಮ್ಮೆಲ್ಲರ ಅಭಿಪ್ರಾಯ. ಈ ಸದನದ ಗೌರವ ಮತ್ತು ಅಧ್ಯಕ್ಷ ಸ್ಥಾನದ ಗೌರವವನ್ನು ಉಳಿಸತಕ್ಕಂಥಾದ್ದು ನಮ್ಮೆಲ್ಲರ ಜತವಾಬ್ದಾರಿಯಾಗಿದೆ. ಅದೇ ಸಂದರ್ಭದಲ್ಲಿ ಜನರ ನಿರೀಕ್ಷೆ ಏನು ಇದೆ, ಆ ನಿರೀಕ್ಷೆಯನ್ನು ನಾವು ಕೂಡ ಸಂಪೂರ್ಣವಾಗಿ ಪೂರ್ತಿಗೊಳಿಸಬೇಕಾಗುತ್ತದೆ. ನಮ್ಮ ಕರ್ನಾಟಕದ ಜನತೆ ಈ ಸದನದಿಂದ ಏನು ನಿರೀಕ್ಷೆ ಮಾಡುತ್ತಾರೆ ಆ ನಿರೀಕ್ಷೆಗಳನ್ನು ಕೂಡ ನಾವು ಗಮನದಲ್ಲಿಟ್ಟು ಈ ಸಮಸ್ಯೆಗೆ ಒಂದು ಅಂತಿಮವಾದ ಪರಿಹಾರವನ್ನು ತೀರ್ಪಿನ ಮುಖಾಂತರ ಸನ್ಮಾನ್ಯ ಸಭಾಧ್ಯಕ್ಷರ ನೀಡಿ ನಮ್ಮ ಸದನದ ಮುಂದಿರತಕ್ಕಂಥ ಹಲವಾರು ಗಂಭೀರವಾದ ವಿಷಯಗಳನ್ನು ಚರ್ಚೆ ಮಾಡುವುದಕ್ಕೋಸ್ಕರವಾಗಿ ಅವಕಾಶ ಮಾಡಿಕೊಡಬೇಕು. ಈ ಎಲ್ಲದರ ಬಗ್ಗೆ ಸನ್ಮಾನ್ಯ ಸಭಾಧ್ಯಕ್ಷರು ಈ ಸಭೆಗೆ ಬಂದು ಈ ಸದನವನ್ನು ನಡೆಸಲಿಕ್ಕೆ ಅವಕಾಶ ಮಾಡಿಕೊಡಬೇಕು. ಈಗಾಗಲೇ ಮಾತನಾಡಿರತಕ್ಕಂಥ ಎಲ್ಲಾ ಮುಖಂಡರುಗಳ ಅಭಿಪ್ರಾಯ ಇದೇ ಆಗಿದೆ. ಈ ಸದನದ ಎಲ್ಲಾ ಸದಸ್ಯರದ್ದು ಕೂಡ ಇದೇ ಅಭಿಪ್ರಾಯವಾಗಿದೆ. ಆ ದೃಷ್ಟಿಯಲ್ಲಿ ನಾನೂ ಕೂಡ ಮಾನ್ಯ ಸಭಾಧ್ಯಕ್ಷರನ್ನು ತಮ್ಮ ಮುಖಾಂತರ ಕಳಕಳಿಯಿಂದ ಮನವಿ ಮಾಡಿಕೊಳ್ಳುತೇನೆ. ಅವರು ಸದನಕ್ಕೆ ಬಂದು ಹಕ್ಕು ಚ್ಯುತಿ ಬಗ್ಗೆ ತೀರ್ಪನ್ನು ನೀಡಬೇಕೆಂದು ಪೇಳಿ ನಾನು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

(ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್‌ರವರು) ಪೀಠವನ್ನು ಅಲಂಕರಿಸಿದರು)

+ ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ) : ಸನ್ಮಾನ್ಯ ಅಧ್ಯಕ್ಷರೆ, ಈ ಸಭೆಯ ಪ್ರಥಮದಲ್ಲಿ ನಾವು ಸೇರಿ 7ನೇ ತಾರೀಖಿನಿಂದ 10ನೇ ತಾರೀಖಿನವರೆಗೆ ನಡೆದಂಥ ಕಾರ್ಯಕ್ರಮದ ಸಂದರ್ಭದಲ್ಲಿ

ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಏನು ಸರ್ಕಾರದ ವಿರುದ್ದದ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದರೋ, ಮಂಡನೆ ಮಾಡಿದಂಥ ಕಾಲದಲ್ಲಿ ಆ ನಿರ್ಣಯದ ಮೇಲೆ ಮಾತನಾಡುವಾಗ ಅವರು ಏನು ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೋ ಅದಕ್ಕೆ ಸಂಬಂಧಪಟ್ಟಂತೆ ಅಂತಿಮ ತೀರ್ಪನ್ನು ಕೊಟ್ಟಿರುತ್ತಿರಿ ಒಂದು ನನ್ನ ಸಹದ್ಯೋಗಿ ಶ್ರೀ ರೋಷನ್‌ಬೇಗ್ ಅವರ ಸಂಬಂಧದಲ್ಲಿ, ಮತ್ತೊಂದು ಈಸದನದ ಸದಸ್ಯರೊಬ್ಬರು ನನ್ನ ಕುರ್ಚಿಯ ಮೇಲೆ ಕುಳಿತು ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎನ್ನುವ ವಿಷಯದಲ್ಲಿ ತಾವು ಕೊಟ್ಟ ತೀರ್ಪಿನ ಮೇಲೆ ಅವರು ಸಭೆ ಅಧಿವೇಶನ ತಾತ್ಕಾಲಿಕವಾಗಿ ಮುಂದೂಡಿದಂಥ ಕಾಲದಲ್ಲಿ ಹೊರಗಡೆ ಪತ್ರಿಕಾ ಸಂದರ್ಶನದಲ್ಲಿ ಅವರು ಕೊಟ್ಟಂತಹ ಕೆಲವು ಹೇಳಿಕೆಗಳ ಬಗ್ಗೆ, ಸದನದ ಬಗ್ಗೆ ಸ್ವಲ್ಪ ಮಟ್ಟಿಗೆ ಸದನದ ಘನತೆಗೆ ಕುಂದು ತರತಕ್ಕಂಥದ್ದಕ್ಕೆ ಅವಕಾಶವಾಗಿದೆ. ಎನ್ನತಂಕ್ಕಂಥಾದ್ದು, ಮತ್ತೊಂದು ತಾವು ಕೊಟ್ಟಂಥ ತೀರ್ಪಿಗೆ ಸ್ವಲ್ಪ ಮಟ್ಟಿಗೆ ತಮ್ಮ ಅಭಿಪ್ರಾಯಕ್ಕೆ ವಿರುದ್ದ ವ್ಯಕ್ತಪಡಿಸಿರತಕ್ಕಂಥ ಭಾವನೆ ಬಂದಿದೆ ಎನ್ನತಕ್ಕಂಥಾದ್ದು. ಇನ್ನೊಂದು, 2 ಪ್ರಮುಖ ರಾಜಕೀಯ ಪಕ್ಷಗಳು ಅವಿಶ್ವಾಸ ನಿರ್ಣಯವನ್ನು ಬೆಂಬಲಿಸಲಿಲ್ಲ ಎನ್ನತಕ್ಕಂಥದ್ದರ ಬಗ್ಗೆ ಅವರದೇ ಆದಂಥ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಮೂರು ವಿಷಯಗಳ ಬಗ್ಗೆ ಈ ಸಭೆಯ ಗೌರವಾನ್ವಿತ ಸದಸ್ಯರುಗಳಾದಂತಹ ಶ್ರೀಮಾನ್ ಶ್ರೀರಾಮರೆಡ್ಡಿಯವರು, ನಾಗೇಗೌಡರು, ಶ್ರೀಮಾನ್ ಬಂಗಾರಪ್ಪನವರು ಹಾಗೂ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು, ಈ 4 ಜನ ಈ ಹಕ್ಕುಚ್ಯುತಿ ನಿರ್ಣಯಕ್ಕೆ ಸೂಚನೆಯನ್ನು ಕೊಟ್ಟು ಅದಕ್ಕೆ ತಮ್ಮ ಅನುಮತಿಯನ್ನು ಕೊಡಬೇಕೆಂದು ಹೇಳಿ ಪೂರ್ವಭಾವಿಯಾಗಿ ವಿಷಯವನ್ನು ಮಂಡನೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ತಮ್ಮ ಕೋಣೆಯಲ್ಲಿ ನಾವು ಈ ಸದನಕ್ಕೆ ಯಾರಿಂದಲೂ ಕೂಡ ಯಾವುದೇ ರೀತಿಯ ಅಪಚಾರ ಆಗಬಾರದು, ಅಷ್ಟೇ ಅಲ್ಲ, ಅದರಲ್ಲೂ ತಮ್ಮ ಸ್ಥಾನದ ಬಗ್ಗೆ, ಇವತ್ತು ತಾವು ಈ ಸ್ಥಾನದಲ್ಲಿ ಕುಳಿತಿರಬಹುದು. ಅಥವಾ ನಾಳೆ ಮತ್ತೆ ಯಾರೇ ಬರಬಹುದು. ಇವತ್ತು ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆ ಎಂದರೆ ಸದನದ ಅಧ್ಯಕ್ಷ ಪೀಠಕ್ಕೆ ನಾವು ಕೊಡಬೇಕಾಗಿರತಕ್ಕಂಥ ಅತ್ಯಂತ ಮಹತ್ತರವಾದಂಥ ಗೌರವ ಏನು ಇದೆ, ಯಾರಿಂದಲೂ ಚ್ಯುತಿ ಬರಬಾರದು ಎನ್ನತಕ್ಕಂಥದ್ದರ ಬಗ್ಗೆ ಸಾಕಷ್ಟು ಸುಧೀರ್ಘವಾಗಿ ಚರ್ಚೆ ಮಾಡಿದ್ದಾರೆ. ನಮಗೆ ಗೊತ್ತಿದೆ ತಾವು ಬಹಳಮಟ್ಟಿಗೆ ನೋವು ಮಾಡಿಕೊಳ್ಳುವುದರ ಜೊತೆಗೆ ಒಂದು ಹಂತದಲ್ಲಿ ನನ್ನ ಗಮನಕ್ಕೂ ಬಾರದ ರೀತಿ ತಾವು ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ದೂರ ಸರಿಸಿ ಬಹುಶಃ ತಮ್ಮ ಮನಸ್ಸಿನ ನೋವನ್ನು ಯಾರಿಗೂ ತಿಳಿಸದೆಯೇ ತಾವು ಕೆಲವು ದಿನ ತಮ್ಮ ದೈನಂದಿನ ಕಾರ್ಯಕಲಾಪವನ್ನು ಹಿಂದೆ ಸರಿಸಿದ್ದು ನನಗೆ ಸುದ್ದಿ ಮುಟ್ಟಿದ ಮೇಲೆ ನಾನು ತಮ್ಮನ್ನು ಸಂಪರ್ಕ ಮಾಡಿದ್ದೇನೆ. ತಮ್ಮಲ್ಲಿ ವಿನಂತಿ ಮಾಡಿದ್ದೇನೆ. ಬಹುಶಃ ಇಡೀ ಸದನದಲ್ಲಿ ಎಲ್ಲರ ಭಾವನೆ, ಇಡೀ 224 ಜನ ಸದಸ್ಯರುಗಳು ಕೂಡ ತಮ್ಮ ಬಗ್ಗೆ ಅತ್ಯಂತ ಗೌರವವನ್ನು ಇಟ್ಟುಕೊಂಡಿದ್ದಾರೆ. ಈ ಒಂದು ಘಟನೆ ಆಕಸ್ಮಿಕವಾಗಿ ಯಾವುದೋ ಒಂದು ಭಾವನೆ ವ್ಯಕ್ತಪಡಿಸತಕ್ಕಂಥ ಕಾಲದಲ್ಲಿ ಸ್ವಲ್ಪಮಟ್ಟಿಗೆ ಹಳಿ ತಪ್ಪಿದಂತಹ ಭಾವನೆ ಇರಬಹುದು, ಅದನ್ನು ದಯಮಾಡಿ ತೀವ್ರವಾಗಿ ಮನಸ್ಸಿಗೆ ಹಚ್ಚಿಕೊಳ್ಳಬಾರದೆಂದು ಹೇಳಿ ತಮ್ಮಲ್ಲಿ ನಾನು ಅಷ್ಟೇ ಅಲ್ಲ, ಎಲ್ಲಾ ಪಕ್ಷದ ಮುಖಂಡರು ತಮ್ಮನ್ನು ಭೇಟಿ ಮಾಡಿ ಸಂಪರ್ಕ ಮಾಡಿ ಈ ವಿಷಯವನ್ನು ತಮ್ಮಲ್ಲಿ ಮನವಿ

ಮಾಡಿದ್ದಾರೆ. ಈತ ಸಂದರ್ಭದಲ್ಲಿ ಸದನದ ಕಾರ್ಯಕಲಾಪ ಮುಂದುವರಿಸಿಕೊಂಡು ಹೋಗುವುದರ ಜೊತೆಗೆ ಏನು ಈ ವಿಷಯ ಸದನದ ಮುಂದೆ ಇದೆಯೋ ಇದಕ್ಕೆ ಒಂದು ಅಂತಿಮವಾದ ನಿರ್ಣಯವನ್ನು ತಮ್ಮಿಂದಲೇ ನಾವು ಪಡೆದುಕೊಳ್ಳಬೇಕೆಂದು ಹೇಳಿ, ತಾವು ಸದನಕ್ಕೆ ಬರಬೇಕೆಂದು ಹೇಳಿದಾಗ ನಿನ್ನೆ ಪುನಃ ಸದನದ ಕಾರ್ಯಕಲಾಪ ನಡೆಯತಕ್ಕಂಥ ಕಾಲದಲ್ಲಿ ಸ್ವಲ್ಪಮಟ್ಟಿಗೆ ತಾವು ಬೇಸರ ಪಟ್ಟುಕೊಂಡು ಹೋದರೂ ಈ ವಿಷಯ ತಿಳಿದುಕೊಂಡ ಮೇಲೆ ಪುನಃ ಬೆಳಿಗ್ಗೆ ಸೇರಿ ನಾವು ಎಲ್ಲಾ ತಮ್ಮಲ್ಲಿ ಏನಂತಿ ಬರಲಿಕ್ಕೆ ಒಪ್ಪಿದ್ದಕ್ಕೆ ಮೊದಲು ಎಲ್ಲಾ ಸದಸ್ಯರ ಪರವಾಗಿ ನಾನು ನಿಮಗೆ ಆಭಾರಿಯಾಗಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ಇಡೀ ಹಿಂದೂ ಸ್ಥಾನದ ರಾಜಕಾರಣದಲ್ಲಿ ಕರ್ನಾಟಕ ವಿಧಾನಸಭೆಗೆ ತನ್ನದೇ ಆದಂಥ ಒಂದು ಎತ್ತರವಾದಂಥ ಸ್ಥಾನವನ್ನು ಇವತ್ತೂ ಉಳಿಸಿಕೊಂಡು ಬಂದಿದ್ದೇನೆ. ಯಾರೇ ಅಧ್ಯಕ್ಷರು ಆಗಿರಲಿ, ಯಾವುದೇ ಪಕ್ಷ ಆಡಳಿತದಲ್ಲಿ ಇರಲಿ, ಯಾವುದೇ ಪಕ್ಷ ವಿರೋಧ ಸ್ಥಾನದಲ್ಲಿ ಕೆಲಸ ಮಾಡತಕ್ಕಂಥ ಸನ್ನಿವೇಶ ಬಂದರೂ ನನ್ನ ದೃಷ್ಟಿಯಲ್ಲಿ ಇಡೀ ಹಿಂದೂಸ್ಥಾನದಲ್ಲಿ ನಾನು ಬೇರೆ ಯಾವುದೇ ವಿಧಾನಸಭೆಗಳ ಬಗ್ಗೆ ಅಗೌರವ ತೋರಿಸುವುದಕ್ಕೆ ನಾನು ಸಿದ್ಧ ಇಲ್ಲ. ಆದರೆ ಬೇರೆ ಎಲ್ಲಾ ವಿಧಾನಸಭೆಗಳಲ್ಲಿ ನಡೆಯತಕ್ಕಂಥ ವಿದ್ಯಾಮಾನಗಳನ್ನು ನೋಡಿದಾಗ ಕರ್ನಾಟಕ ವಿಧಾನಸಭೆಗೆ ತನ್ನದೇ ಆದಂಥ ಒಂದು ಘನತೆ, ಗೌರವ ಗಾಂಭೀರ್ಯವನ್ನು ಈ ಸದನ ಕಾಪಾಡಿಕೊಂಡು ಬಂದಿದೆ. ಅದಕ್ಕೆ ಎಲ್ಲಾ ಕಾಲದಲ್ಲಿ, ಎಲ್ಲಾ ಸದಸ್ಯರೂ ಕೂಡ ಆ ಒಂದು ಘನತೆ, ಗಾಂಭೀರ್ಯ ಈ ಸದನಕ್ಕೆ ಇರತಕ್ಕಂತಹ ಪಾವಿತ್ರತೆಯನ್ನು ಉಳಿಸಿಕೊಳ್ಳುವುದಕ್ಕೆ ಎಲ್ಲಾ ಕಡೆಯಿಂದ ಪ್ರಯತ್ನ ಮಾಡಿದ್ದಾರೆ. ಕೇವಲ ಆಳುವ ಪಕ್ಷಕ್ಕೆ ಮಾತ್ರ ಸಲ್ಲತಕ್ಕ ವಿಷಯ ಅಲ್ಲ ಇದು. ಇಡೀ ಸದನಕ್ಕೆ ಸಲ್ಲಬೇಕಾಗುತ್ತದೆ. ಈ ಒಂದು ಘಟನೆಯಿಂದ, ಸದನದ ಕಾರ್ಯಕಲಾಪದ ಬಗ್ಗೆ ಅಧ್ಯಕ್ಷ ಪೀಠದಿಂದ ಬಂದಂತಹ ತೀರ್ಪಿನ ಬಗ್ಗೆ ಹೊರಗಡೆ ಏನು ತಮ್ಮ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸತಕ್ಕ ಕಾಲದಲ್ಲಿ ಸದನದಲ್ಲಿ ಇರಬಹುದಾದಂತಹ ಕೆಲವು ಶಕ್ತಿಗಳ ಬಗ್ಗೆ ಅವರ ಭಾವನೆಗಳನ್ನು ವ್ಯಕ್ತಪಡಿಸಿದರ ಬಗ್ಗೆ, ನಿನ್ನೆ ಸನ್ಮಾನ್ಯ ವಿರೋಧಪಕ್ಷದ ನಾಯಕರು, ಅವರು ಈ ಸದನಕ್ಕೆ ತಮ್ಮ ಭಾವನೆಯಿಂದ ಏನು ಆತಂಕವಾಗಿದೆ, ಅದರ ಬಗ್ಗೆ ತಮ್ಮ ವಿಷಾಧವನ್ನು ವ್ಯಕ್ತಪಡಿಸಿದ್ದಾರೆ. ಕ್ಷಮೆ ಕೇಳಿದ್ದಾರೆ, ಅದನ್ನು ಅಲ್ಲಿಗೆ ಕೈಬಿಟ್ಟು, ತಾವು ಇನ್ನೊಂದು ವಿಷಯದ ಬಗ್ಗೆ ವಿವರಣೆಯನ್ನು ಕೊಡಬೇಕಾಗುತ್ತದೆ. ಅದು 2 ಪ್ರಮುಖ ರಾಜಕೀಯ ಪಕ್ಷಗಳು ಅವಿಶ್ವಾಸ ನಿರ್ಣಯಕ್ಕೆ ಸಂಬಂಧಪಟ್ಟಂತೆ ಅವರು ಏನು ಮತದಾನ ಮಾಡಲಿಲ್ಲ ಎನ್ನುವುದರ ಬಗ್ಗೆ, ಸನ್ಮಾನ್ಯ ವಿರೋಧಿ ಪಕ್ಷದ ನಾಯಕರು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ, ಈ ಸದನದ ಹೊರಗಡೆ, ಅದು ಹಕ್ಕುಚ್ಯುತಿಗೆ ಬರುತ್ತದೆಯೋ ಅಥವಾ ಬರುವುದಿಲ್ಲವೋ ಅದರ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಅದು ನನ್ನ ಕರ್ತವ್ಯ ಅಲ್ಲ. ಅದು ತಮಗೆ ಸೇರಿದ್ದುದು ತಾವು ಈ ಸ್ಥಾನದಲ್ಲಿ ಕುಳಿತು ಒಂದು ನಿರ್ಣಯಕ್ಕೆ ಬರಬೇಕೇ ಪರಂತು, ನಾನು ಹೇಳಲಿಕ್ಕೆ ಸಾಧ್ಯವಿಲ್ಲ. ಆದರೆ ನನಗೆ ಇರತಕ್ಕ ಅಲ್ಪಸ್ವಲ್ಪ ಅನುಭವದಿಂದ ಒಂದು ಮಾತನ್ನು ಮಾತ್ರ ಹೇಳಬೇಕಾಗುತ್ತದೆ. ಸದನದಲ್ಲಿ ಪ್ರತಿಯೊಂದು ರಾಜಕೀಯ ಪಕ್ಷಗಳ ಕಾರ್ಯಕ್ರಮಗಳ ಬಗ್ಗೆ ನಾವು ಟೀಕೆ ಮಾಡುತ್ತೇವೆ. ಪ್ರತಿಯೊಂದು ರಾಜಕೀಯ ಪಕ್ಷಗಳ ಅವರ ಕಾರ್ಯಕ್ರಮಗಳ ಬಗ್ಗೆ ಹೊರಗಡೆ ಟೀಕೆ ಮಾಡುತ್ತೇವೆ. ಅದರ ಬಗ್ಗೆ ನಾನು ಯಾವುದೇ ಹಕ್ಕುಚ್ಯುತಿ, ತಪ್ಪು ನಡವಳಿಕೆ, ಎಂದು ಹೇಳಲಿಕ್ಕೆ

ಸಿದ್ದ ಇಲ್ಲ. ಆದರೆ ಏನೊಂದು ಅವಿಶ್ವಾಸ ನಿರ್ಣಯ ಮಂಡನೆಯಾದಂತಹ ಕಾಲದಲ್ಲಿ ಪ್ರತಿಯೊಬ್ಬ ಸದಸ್ಯರಿಗೂ ಆ ಒಂದು ನಿರ್ಣಯಕ್ಕೆ ಸಂಬಂಧಪಟ್ಟಂತೆ ಮತ ಕೊಡತಕ್ಕಂಥದ್ದು ಅಥವಾ ವಿರೋಧ ಮಾಡತಕ್ಕಂತದ್ದು ಅದು ಆ ಸದಸ್ಯರ ಹಕ್ಕು. ಆ ಹಕ್ಕನ್ನು ಯಾರೂ ಕೂಡ ಕಸಿದುಕೊಳ್ಳುವುದಕ್ಕೆ ಸಾಧ್ಯ ಆಗುವುದಿಲ್ಲ. ಅವರು ಹೀಗೇ ಮತಕೊಡಬೇಕು, ಹೀಗೇ ಮತಕೊಡಬಾರದು ಎಂದು ಹೇಳಿ ಯಾರೂ ಅವರಿಗೆ ಆದೇಶ ಕೊಡಲಿಕ್ಕೆ ಸಾಧ್ಯ ಇಲ್ಲ. ಆದರೆ ಇತ್ತೀಚೆಗೆ, ಸದಸ್ಯರುಗಳು ಆಯಾ ಪಕ್ಷಗಳ ನಿರ್ಣಯಕ್ಕೆ ತಲೆಬಾಗಿ ನಡೆದುಕೊಳ್ಳಬೇಕು, ಹಾಗೆ ಅವರು ನಡೆದುಕೊಳ್ಳದಿದ್ದರೆ, ಪಕ್ಷಾಂತರ ಮಸೂದೆಯ ವ್ಯಾಪ್ತಿಯಲ್ಲಿ ಕ್ರಮ ತೆಗೆದುಕೊಳ್ಳತಕ್ಕಂತಹ ಒಂದು ಹೊಸ ವಿಧೇಯಕವನ್ನು ಮಂಡನೆ ಮಾಡಿದ ಮೇಲೆ, ಆ ಪಕ್ಷದ ವಿಪ್‌ರವರಿಂದ ಏನು ಸೂಚನೆ ಬರುತ್ತದೆಯೋ ಅದರಂತೆ ಅವರು ನಡೆದುಕೊಳ್ಳಬೇಕಾಗುತ್ತದೆ. ಅದು ಅವರಿಗೆ ಸೇರಿದ ವಿಷಯ. ಆದರೆ ಆ ಎರಡೂ ಪ್ರಮುಖ ರಾಜಕೀಯ ಪಕ್ಷಗಳು, ಈ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದಂತಹ ಕಾಲದಲ್ಲಿ, ಅದನ್ನು ಮತಕ್ಕೆ ಹಾಕಿದಾಗ, ಅವರು ಮತ ಕೊಡದೇ ಇರುವುದಕ್ಕೆ, ಅವರು ಹಿಂದೆ ಅಧಿಕಾರವನ್ನು ನಡೆಸುತ್ತಿದ್ದಂತಹ ಕಾಲದಲ್ಲಿ, ಅವರು ನಡೆಸಿರಬಹುದಾದ ಅಪರಾಧಗಳನ್ನು ಮುಚ್ಚಿಕೊಳ್ಳುವುದಕ್ಕೋಸ್ಕರವಾಗಿ,ಇವತ್ತು ಆಳುವ ಪಕ್ಷದ ಜೊತೆ ಒಂದು ರೀತಿಯ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಅಥವಾ ಮುಂದೆ ಆಳುವ ಪಕ್ಷದವರ ತಪ್ಪನ್ನು ನೀವೂ ಕೂಡ ಹೇಳಬೇಡಿ ಎಂದು ಹೇಳಿ ಇಬ್ಬರೂ ಒಂದು ರೀತಿಯ ಹೊಂದಾಣಿಕೆ ಮಾಡಿ ಕೊಂಡಿದ್ದಾರೆ ಎನ್ನುವ ಭಾವನೆ ಬರತಕ್ಕ ರೀತಿಯಲ್ಲಿ ಏನು ವ್ಯಕ್ತಪಡಿಸಿದ್ದಾರೆ, ಯಾವುದೇ ರಾಜಕೀಯ ಪಕ್ಷದ ಮುಖಂಡರುಗಳು, ಸರಾಸಗಟಾಗಿ ಹೇಳುತ್ತಿಲ್ಲ, 224 ಸದಸ್ಯರು ಏನು ಇದ್ದಾರೆ, ಎಲ್ಲಾ ಪಕ್ಷದ, ಎಲ್ಲಾ ಕಡೆಯಿಂದ ಈ ಸದನದ ಗೌರವವನ್ನು ಕಾಪಾಡಿಕೊಂಡು ಹೋಗತಕ್ಕಂತಹದ್ದು ನಮ್ಮೆಲ್ಲರ ಜವಾಬ್ದಾರಿ. ಯಾವುದೇ ಪ್ರಭಾವ ಬೀರಿ ವೈಯಕ್ತಿಕವಾಗಿ ನಮ್ಮಿಂದ ಮಾಡಿಸಿಕೊಳ್ಳುವುದಕ್ಕೆ ಬಂದಿಲ್ಲ. ಅದರಲ್ಲೂ ವಿಶೇಷವಾಗಿ ಕೆ.ಸಿ.ಪಿ.ಯವರಾಗಲೀ, ಕಾಂಗ್ರೆಸ್ ಪಕ್ಷದ ಸದಸ್ಯರಾಗಲಿ, ನಾನು ಕೇವಲ ಔಪಚಾರಿಕವಾಗಿ ಇವತ್ತು ಈ ಮಾತನ್ನು ಹೇಳುತ್ತಿಲ್ಲ. ಈ ದಿವಶದವರೆಗೆ, ನನ್ನ 8 ತಿಂಗಳ ಅಡಳಿತದಲ್ಲಿ ಇವತ್ತಿಗೆ 9ನೇ ತಿಂಗಳಿಗೆ ಕಾಲಿಟ್ಟಿದ್ದೇವೆ, ಇಲ್ಲಿಯವರೆಗೆ ಯಾವುದೇ ಸಂದರ್ಭದಲ್ಲಿ ಹಿಂದಿನ ಸರ್ಕಾರದ ಯಾವುದೇ ನಿರ್ಣಯದ ಬಗ್ಗೆ ಯಾರೂ ನನ್ನ ಹತ್ತಿರ ಬಂದು ಪ್ರಸ್ತಾಪ ಮಾಡಿಲ್ಲ. ಆದ್ದರಿಂದ ಇದನ್ನು ಈ ವೇದಿಕೆಯ ಮುಖೇನ ಸಾರ್ವಜನಿಕರಿಗೆ ನಾನು ಹೇಳುತ್ತಿದ್ದೇನೆ. ಯಾವುದೇ ಸಂದರ್ಭದಲ್ಲಿಯೂ ಕೂಡ ಈ ಸದನದ ಒಳಗಡೆಯಾಗಲಿ, ಅಥವಾ ಹೊರಗಡೆಯಾಗಲಿ, ಹಿಂದಿನ ಸರ್ಕಾರಗಳು ಬಂಗಾರಪ್ಪನವರ ಸರ್ಕಾರ ಇರಬಹುದು. ವೀರೆಂದ್ರ ಪಾಟೀಲರವರ ಸರ್ಕಾರ ಇರಬಹುದು, ಅಥವಾ ಮೊಯಿಲಿಯವರ ಸರ್ಕಾರ ಇರಬಹುದು, ಯಾವುದೇ ಸಂದರ್ಭದಲ್ಲಿ ಅವರು ಸರ್ಕಾರದ ಮೇಲೆ ಪ್ರಭಾವ ಬೀರುವುದಕ್ಕೆ ಬಂದಿಲ್ಲ ಎನ್ನತಕ್ಕಂತಹ ಮಾತನ್ನು ಪ್ರಾಮಾಣಿಕವಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ. ಆ ಮಾತನ್ನಾಡಿದ್ದು ಬಹುಶಃ ಅವಿಶ್ವಾಸ ನಿರ್ಣಯಕ್ಕೆ ಸಂಬಂಧಪಟ್ಟಂತೆ ತೀರ್ಮಾನದ ಸಂದರ್ಭದಲ್ಲಿ ಈ ಮಾತನ್ನು ಆಡಬಾರದಾಗಿತ್ತು ಎಂಬುದು ನನ್ನ ಭಾವನೆ. ಏಕೆಂದರೆ ಅದು ಹಕ್ಕುಚ್ಯುತಿಗೆ ಬರುವುದು ಬಿಡುವುದು, ಆ ವಿಷಯ ಬೇರೆ. ಆದರೆ ಆ ಸಂದರ್ಭ ಆದಲ್ಲ ಎನ್ನತಕ್ಕಂತಹದ್ದನ್ನು ಈ ಸಂದರ್ಭದಲ್ಲಿ ಈ ಸದನದ ಮುಖೇನ

ಸಾರ್ವಜನಿಕರ ಯಾರ ಮನಸ್ಸಿನಲ್ಲೂ ಇದರ ಬಗ್ಗೆ ಸಂಶಯ ಉಳಿಯಬಾರದು. ಈ ವಿಷಯವನ್ನು ಸ್ಪಷ್ಟೀಕರಣ ಮಾಡಲಿಕ್ಕೆ ಇಚ್ಛಿಪಡುತ್ತೇನೆ. ಒಂದೊಂದು ಸಂದರ್ಭಗಳಲ್ಲಿ ಒಂದೊಂದು ನಿರ್ಣಯಗಳಾಗುತ್ತವೆ. ಪಾರ್ಲಿಮೆಂಟಿನಲ್ಲೂ ಕೂಡ ಪ್ರತಿಯೊಂದು ರಾಜಕೀಯ ಪಕ್ಷಗಳು, ತಮ್ಮ ತಮ್ಮ ರೀತಿಯಲ್ಲಿ ನಡೆದುಕೊಳ್ಳುತ್ತಾರೆ. ಕೆಲವು ಸಂದರ್ಭದಲ್ಲಿ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ತಂದಾಗ ಬಿ.ಜೆ.ಪಿ. ಮಂಡನೆ ಮಾಡಿದರೆ ಸಿ.ಪಿ.ಎಂ.ನವರು ತಟಸ್ಥರಾಗಿರಬಹುದು. ಜನತಾದಳ ತಟಸ್ಥರಾಗಿರಬಹುದು. ಅಥವಾ ಬೇರೆ ಎಡ ಪಕ್ಷಗಳು ಯುವುದಾದರೂ ಒಂದು ಕಡೆ ಮೋಷನ್ ಅನ್ನು ಮಂಡನೆ ಮಾಡಿದಾಗ ಬಿ.ಜೆಪಿ.ಯವರು ತಟಸ್ಥರಾಗಿರಬಹುದು. ಇದು ರಾಷ್ಟ್ರ ರಾಜಕಾರಣದಲ್ಲಿ ನಡೆದುಕೊಂಡು ಬಂದಿರತಕ್ಕಂಥದ್ದೇ,ಇಂಥ ಹಲವಾರು ಘಟನೆಗಳೇ ಮುಂದೆ ಇದ್ದಾವೆ. ಅದರಿಂದ ಇದರಲ್ಲೇನೋ ಯಾವುದೋ ಪ್ರತಿಫಲ ಪಡೆದುಕೊಳ್ಳುವುದಕ್ಕೋಸ್ಕರವಾಗಿ ಹಿಂದೆ ಮಾಡಬಹುದಾದ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕೆ ಆಗಲಿ, ಅಥವಾ ಮುಂದೆ ನಾವು ಮಾಡಬಹುದಾದ ದೋಷಗಳನ್ನು ಮುಚ್ಚಿಕೊಳ್ಳುವುದಕ್ಕೆ ಇದನ್ನು ನಡೆಸಿಕೊಂಡು ಬಂದಿದ್ದಾರೆ ಎಂದು ಹೇಳಿದ ಮಾತು ಔಚಿತ್ಯ ಪೂರ್ಣವಾದ ಮಾತಲ್ಲ. ಎಂಬುದನ್ನು ಈ ಸಂದರ್ಭದಲ್ಲಿ ತಮ್ಮ ಮುಂದೆ ನಿವೇದನೆ ಮಾಡಿಕೊಳ್ಳುತ್ತೇನೆ. ಅದರಿಂದ ಎರಡೂ ರಾಜಕೀಯ ಪಕ್ಷಗಳ ಸದಸ್ಯರು ನನ್ನ ಮುಂದೆ ಪ್ರಭಾವ ಬೀರಲಿಕ್ಕೆ ಬಂದಿಲ್ಲ ಎಂಬುದನ್ನು ಮತ್ತೊಮ್ಮೆ ಸ್ಪಷ್ಟೀಕರಣ ಮಾಡಬಯಸುತ್ತೇನೆ. ತಾವು ಇದರ ಬಗ್ಗೆ ತಮ್ಮ ಅಂತಿಮ ತೀರ್ಪು ಕೊಟ್ಟು ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡಿ ಮುಂದಿನ ಕಾರ್ಯಕಲಾಪಗಳನ್ನು ನಡೆಸಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳಿ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಈ ಘಟನೆ ಏನು ನಡೆದಿದೆಯೋ ಅದರಲ್ಲೂ ತೀವ್ರವಾಗಿ ನಿಮ್ಮ ಮನಸ್ಸಿಗೆ ಏನು ನೋವು ಮಾಡಿಕೊಂಡಿದ್ದೀರಿ ಅದಕ್ಕೆ ನಾನು ಈ ಸಂದರ್ಭದಲ್ಲಿ ಇಷ್ಟೇ ಹೇಳುತ್ತೇನೆ, ಈ ಸದನದ ಗೌರವವನ್ನು ಅದರಲ್ಲೂ ನಿಮ್ಮ ಸ್ಥಾನದ ಗೌರವವನ್ನು ಕಾಪಾಡಿಕೊಂಡು ಹೋಗುವುದಕ್ಕೆ ನಾವೆಲ್ಲರೂ ಇನ್ನು ಮುಂದೆ ನೀವು ಕೊಡುವ ನಿರ್ಣಯಕ್ಕೆ ತಲೆ ಬಾಗಿ ನಡೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಸಭಾ ನಾಯಕನಾಗಿ ಹೇಳಲಿಕ್ಕೆ ಬಯಸುತ್ತೇನೆ. ಇಷ್ಟು ಮಾತನಾಡಲಿಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ ಕ್ಷೇತ್ರ) : ಮಾನ್ಯ ಅಧ್ಯಕ್ಷರೇ, ತಾವು ಈ ಸಭೆಗೆ ಬಂದು ಕಾರ್ಯಕಲಾಪಗಳನ್ನು ನಡೆಸಿಕೊಡತಕ್ಕ ಜವಾಬ್ದಾರಿಯನ್ನು ಹೊತ್ತಿದ್ದಕ್ಕೋಸ್ಕರವಾಗಿ ನಾನು ನಮ್ಮ ಎಲ್ಲಾ ವಿರೋಧಪಕ್ಷದವರ ಪರವಾಗಿ ಅತ್ಯಂತ ಕಳಕಳಿಯಿಂದ ತಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈ ಒಂದು ವಿಚಾರಕ್ಕೆ ಒಂದು ಅಂತಿಮ ತೆರೆ ಬೀಳಬೇಕಾದರೆ ಸುಮಾರು 5 ದಿನಗಳ ಕಾಲ ಹಿಡಿಯಿತು. ಆ ತೆರೆ ಬೀಳುವಲ್ಲಿ ಇಲ್ಲಿರತಕ್ಕ ಎಲ್ಲಾ ವಿರೋಧಪಕ್ಷದ ಮುಖಂಡರುಗಳು ಮತ್ತು ಮುಖ್ಯಮಂತ್ರಿಯವರು, ಎಲ್ಲರ ಸಹಕಾರವನ್ನು ಮೆಚ್ಚತಕ್ಕಂತಹದ್ದು. ಈ ಸಂದರ್ಭದಲ್ಲಿ ಒಂದು ಅಂತಿಮ ಮುಕ್ತಾಯ ಘಟಕ್ಕೆ ಬರಲೇಬೇಕು. ಒಂದು ತಮ್ಮಲ್ಲಿಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ, ತಮ್ಮ ತೀರ್ಪನ್ನು ಕೊಡುವುದಕ್ಕಿಂದ ಮುಂಚಿತವಾಗಿ, ಚರ್ಚೆ ಇಲ್ಲಿ ಮುಕ್ತವಾಗಿ ಆಗಬೇಕು. ಯಾವುದೇ ವಿಚಾರದಲ್ಲಿ ಮುಕ್ತ ಚರ್ಚೆ ಆಗಬೇಕು. ಮುಕ್ತ ಚರ್ಚೆಗೆ ಎಲ್ಲೋ ಒಂದು ಕಡೆ

ತಡೆ ಹಿಡಿಯುತ್ತಾರೇನೋ ಎನ್ನುವ ಭಾವನೆ ಯಾರಲ್ಲೂ ಬರಬಾರದು. ಈ ಸದನದಲ್ಲಿ ಚರ್ಚೆ ಮುಕ್ತವಾಗಿ ಆಗಬೇಕು. ಎಲ್ಲೋ ಒಂದು ಕಡೆ ಎಲ್ಲರೂ ಸೇರಿ ವಿರೋಧ ಪಕ್ಷದ ನಾಯಕರನ್ನು ತುಳಿಯುತ್ತಿದ್ದಾರೆ ಎನ್ನುವ ಭಾವನೆ ಜನರಲ್ಲಿ ಮೂಡತಕ್ಕ ಪರಿಸ್ಥಿತಿ ನಿರ್ಮಾಣ ಆಗಬಾರದು. ಅದು ಸರಿಯಲ್ಲ. ಮತ್ತು ನಾವು ವಿರೋಧ ಪಕ್ಷದಲ್ಲಿರುವಾಗ ಒಂದಲ್ಲ ಹಲವು ಭಾರಿ ಅನೇಕ ವಿಚಾರಗಳಲ್ಲಿ ಚರ್ಚೆಯಾಗಬೇಕಾಗುತ್ತದೆ. ಚರ್ಚೆಯ ಧಾಟಿ ಯಾವ ರೀತಿ ಇರಬೇಕು? ಯಾವ ಮಟ್ಟಕ್ಕೆ ಹೋಗಬೇಕು ಎನ್ನತಕ್ಕಂಥದ್ದು, ಆ ಚರ್ಚೆಯನ್ನವಲಂಬಿಸುತ್ತದೆ. ಮತ್ತು ಮಾತಿನ ಧಾಟಿ ಮೇಲೆ ಹೋಗುತ್ತದೆ. ನಾನು 67ರಿಂದ ಈ ಸಭೆಯಲ್ಲಿ ಇದ್ದೇನೆ. 67ರಿಂದ ಎಲ್ಲರೂ ಇದ್ದೇವೆ. ಅನೇಕ ಸಂದರ್ಭಗಳಲ್ಲಿ ಮಾದ ವಿವಾದಗಳು ನಡೆದು ಅಧ್ಯಕ್ಷರ ಮಾತಿನ ಬಗ್ಗೆಯೂ ಸಹ ನಾನು ಎಷ್ಟೋ ಸಾರಿ ಇದು ಸರಿಯಲ್ಲ ಎಂದು ಹೇಳಿದಾಗ ನನ್ನನ್ನು ಮಾರ್ಷಲ್ ಎತ್ತಿ ಹೊರಗೆ ಹಾಕುವ ಮಟ್ಟಕ್ಕೂ ಹೋಗಿದೆ. ಅದನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ. ಇತ್ತೀಚಿನ ದಿನಗಳಲ್ಲಿ ಆ ಮಟ್ಟಕ್ಕೆ ಹೋಗತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗಿಲ್ಲ. ಅದನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

3.00 ಪಿ.ಎಂ

ಆದು ಆಗಬಾರದೆನ್ನುವ ಪರಿಸ್ಥಿತಿಯಲ್ಲಿ ನಾವೆಲ್ಲಾ ಇದ್ದೇವೆ. ಅಂತಹ ಸಂದರ್ಭ ಬಂದರೂ ಬರಬಹುದು. ಅಂದರೆ ತಾವು ಅದನ್ನು ಆ ಸಂದರ್ಭ ಬಂತು ಎಂದು ಹೇಳಿ ತಾವು ನಮ್ಮನ್ನು ಹೊರಗೆ ಹಾಕತಕ್ಕ ಮಟ್ಟಕ್ಕೆ ಹೋಗಲಾರಿರಿ ಎಂದು ನಾನು ಅಂದುಕೊಂಡಿದ್ದೇನೆ. ಆ ಮಟ್ಟಕ್ಕೆ ಹೋಗಲಾರಿರಿ ಎಂದು ನಾನು ಪ್ರಾಮಾಣಿಕವಾಗಿ ಅಂದುಕೊಂಡಿದ್ದೇನೆ. ಈ ಮಾತನ್ನು ನಾನು ಏಕೆ ಉದಾಹರಣೆಯಾಗಿ ಹೇಳುತ್ತಿದ್ದೇನೆಂದರೆ, ನಾನು ಎದ್ದು ಸ್ವಲ್ಪ ಮಾತನಾಡುವ ಬರದಲ್ಲಿ ಶಬ್ದ, ಯಾವ್ಯಾವ ಶಬ್ದ ಉಪಯೋಗಿಸಬೇಕು, ಎನ್ನುವಾಗ ಸ್ವಲ್ಪ ಬದಲಾವಣೆಯಾಗಬಹುದು. ನೀವು ಅದನ್ನೇ ಹಿಡಿದುಕೊಂಡು ನೀವು ಈ ಶಬ್ದ ಹೇಳಿದ್ದುದು ಸರಿಯಿಲ್ಲ ಎಂದು ಆಡಳಿತ ಪಕ್ಷ ಹೊರಟಾಗ ನಮ್ಮ ಪರಿಸ್ಥಿತಿಯೇನು? ಆದ್ದರಿಂದ ನಮಗೆ ರಕ್ಷಣೆ ಕೊಡತಕ್ಕದ್ದು ತಮ್ಮ ಜವಾಬ್ದಾರಿ. ಆದ್ದರಿಂದ ಮುಕ್ತ ಚರ್ಚೆಗೆ ಇಲ್ಲಿ ಗ್ರಹಣ ಹಿಡಿಯಬಾರದು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅತ್ಯಂತ ಹೆಚ್ಚಿನ ಮಹತ್ವ ಮತ್ತು ಗೌರವವನ್ನು ಪಡೆದಿರತಕ್ಕಂತಹ ಶಾಸನಸಭೆ ಮತ್ತು ಲೋಕಸಭೆಯಲ್ಲಿ ಮುಕ್ತ ಚರ್ಚೆಗೆ ಅವಕಾಶವಿದೆ. ಆದ್ದರಿಂದ ನಾನೇನು ಹೇಳುತ್ತಿದ್ದೇನೆಂದರೆ, ವಿರೋಧಪಕ್ಷದ ನಾಯಕರು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿ ಅದರಲ್ಲಿ ಅನೇಕ ವಿಚಾರಗಳನ್ನು ಚರ್ಚಿಮಾಡಿ ಹೊರಗಡೆ ಪತ್ರಿಕೆಗಳಿಗೆ ಹೇಳಿಕೆಯನ್ನು ಕೊಟ್ಟಿರತಕ್ಕಕ್ಕೆ ನಂತರ ಬಂದು ಅವರು ವಿಷಾದವನ್ನು ವ್ಯಕ್ತಪಡಿಸಿದರು. ಅಲ್ಲಿಗೆ ಅದು ಅಂತಿಮ. ಮಾನ್ಯ ಅಧ್ಯಕ್ಷರ ಬಗ್ಗೆ ಅಡಿದಂತಹ ಮಾತುಗಳ ಬಗ್ಗೆ ಅತ್ಯಂತ ಕಳಕಳಿಯಿಂದ ಈ ಸದನದಲ್ಲಿ ಭೇಷರತ್ ಆಗಿ ಅವರು ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ತಾವು ಕೊಡತಕ್ಕ ತೀರ್ಪು, ಅದನ್ನು ಯಾವರೀತಿ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿಲ್ಲ. ಆದರೆ ಅದು ನಮ್ಮ ಮುಕ್ತ ಚರ್ಚೆಗೆ ಯಾವುದೇ ಅಡ್ಡಿ ಆತಂಕ ಬರದ ರೀತಿಯಲ್ಲಿರಬೇಕೆಂದು ತಮ್ಮಲ್ಲಿ ನಾನು ಮನವಿ ಮಾಡಿಕೊಂಡು ಮತ್ತೊಮ್ಮೆ ನಾನು ತಮ್ಮಲ್ಲಿ ಅತ್ಯಂತ

ಕಳಕಳಿಯಿಂದ ಮನವಿ ಮಾಡುತ್ತೇನೆ. ಈ ಸದನದ ಗೌರವವನ್ನು ಎತ್ತಿಹಿಡಿಯುವುದರಲ್ಲಿ ತಾವು ಮೊದಲ್ಗಿಗರಾಗಿದ್ದೀರಿ. ತಾವು ಅಧ್ಯಕ್ಷರಾಗಿ ಬಂದಂದಿನಿಂದ ಇಂದಿನವರೆಗೆ ಈ ಸದನದ ಪವಿತ್ರತೆಯನ್ನು ಕಾಪಾಡಿದ್ದೀರಿ. ಒಳ್ಳೆಯ ಸತ್‌ಸಂಪ್ರದಾಯವನ್ನು ಹಾಕಿಕೊಂಡು ಹೋಗತಕ್ಕವ್ಯವಸ್ಥೆ ತಮ್ಮಲ್ಲಿದೆ. ಆ ದೃಷ್ಟಿಯಿಂದ ಎಲ್ಲಾ ವಿರೋಧಪಕ್ಷಗಳ ಮುಖಂಡರ ಪರವಾಗಿ ತಮಗೆ ನಾನು ಕಳಕಳಿಯ ಮನವಿಯನ್ನು ಮಾಡಿ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರ ತೀರ್ಪು

ಅಧ್ಯಕ್ಷರು : ಸನ್ಮಾನ್ಯ ಸಭಾನಾಯಕರಾದಿಯಾಗಿ,ಎಲ್ಲಾ ಮಾನ್ಯ ಸದಸ್ಯರುಗಳು ವ್ಯಕ್ತಮಾಡಿರತಕ್ಕ ಭಾವನೆಗಳನ್ನು ಅತ್ಯಂತ ನಮ್ರತೆಯಿಂದ ಸ್ವೀಕರಿಸಿದ್ದೇನೆ. ಸದನದ ಮತ್ತು ಸಭಾಧ್ಯಕ್ಷರ ಸ್ಥಾನದ ಗೌರವ ರಕ್ಷಣೆ ನನ್ನ ಒಬ್ಬನಿಂದ ಸಾಧ್ಯವಾಗುವುದಿಲ್ಲ. ತಮ್ಮೆಲ್ಲರ ಸಹಕಾರ ಇದ್ದಾಗ ಮಾತ್ರ ಅದು ಸಾಧ್ಯವಾಗುತ್ತದೆ. ಸಭಾಧ್ಯಕ್ಷದ ಸ್ಥಾನದ ಗೌರವ ನಮ್ಮದೇ ಸ್ವಾರ್ಥ ದೃಷ್ಟಿಯಿಂದ ನಾವು ರಕ್ಷಣೆ ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಇಡೀ ವ್ಯವಸ್ಥೆಯಲ್ಲೇ ಇದು ಗೌರವಕ್ಕೆ ಒಳಗಾಗುವುದಿಲ್ಲ. ಒಂದು ದೂರದೃಷ್ಟಿಯಿಂದ ನಾವು ಈ ಕೆಲಸವನ್ನು ಮಾಡಲೇಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ವ್ಯಕ್ತಪಡಿಸಿದ ತಕ್ಕ ಭಾವನೆಗಳನ್ನು ಮನಸ್ಸಿಟ್ಟುಕೊಂಡು ಈ ಸದನದ ಹಿರಿಮೆ ಮತ್ತು ಪಾವಿತ್ರತೆಯನ್ನು ರಕ್ಷಿಸುವ ಕಾರ್ಯವನ್ನು ನಾನು ಮುಂದುವರಿಸಿಕೊಂಡು ಹೋಗುತ್ತೇನೆ ಎನ್ನತಕ್ಕ ಭರವಸೆಯನ್ನು ಕೊಟ್ಟು ನಿಯಮ 191ರ ಕೆಳಗಡೆ ತಾವೇನು ಸೂಚನೆಯನ್ನು ಕೊಟ್ಟಿದ್ದೀರಿ ಅದರ ಬಗ್ಗೆ ನನ್ನ ತೀರ್ಪನ್ನು ಓದುತ್ತೇನೆ.

ನಿಯಮ 191ರ ಮೇರೆಗೆ ಸನ್ಮಾನ್ಯ ಸದಸ್ಯರುಗಳಾದ ಶ್ರೀ ಶ್ರೀರಾಮರೆಡ್ಡಿ, ಶ್ರೀ ಕೆ.ಎನ್. ನಾಗೇಗೌಡ, ಶ್ರೀ ಎಸ್. ಬಂಗಾರಪ್ಪ, ಶ್ರೀ ಮಲ್ಲಿಕಾರ್ಜುನ ಖರ್ಗೆ ಹಾಗೂ ಇತರರು ಸೂಚನೆಯನ್ನು ನೀಡಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ದಿನಾಂಕ 10-8-1995ರಂದು ಪತ್ರಿಕಾಗೋಷ್ಟಿಯನ್ನು ಉದ್ದೇಶಿಸಿ ಮಾತನಾಡುವ ಸಂದರ್ಭದಲ್ಲಿ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ ಸಭಾಧ್ಯಕ್ಷರ ಸ್ಥಾನಕ್ಕೆ , ತನ್ಮೂಲಕ ಸದನದ ಹಕ್ಕಿಗೆ ಮತ್ತು ಸದನದ ಗೌರವದ ಬಗ್ಗೆ ಚ್ಯುತಿ ಬರುವಂತಹ ಮಾತುಗಳನ್ನು ಆಡಿದ್ದಾರೆಂದು ಪ್ರಸ್ತಾಪಿಸಿರುತ್ತಾರೆ.

ಮುಂದುವರೆದು ಇದೇ ಪತ್ರಿಕಾಗೋಷ್ಟಿಯಲ್ಲಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು "ಸದನದಲ್ಲಿ ಸಮಾಜಘಾತುಕ ಶಕ್ತಿಗಳಿಗೆ ರಕ್ಷಣೆ ಕೊಡತಕ್ಕಂಥವರು ಇದ್ದಾರೆ ಎಂಬ ಅರ್ಥ ಬರುವಂತೆ ಆಡಿರುವ ಮಾತುಗಳು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಬಿಚ್ಚಾಗಿದ್ದು, ಈವಿಷಯ ಸದನದ ಗೌರವಕ್ಕೆ ಚ್ಯುತಿ ಬರುತ್ತಿದೆ ಎಂಬುದನ್ನು ಸೂಚನೆಯಲ್ಲಿ ಪ್ರಸ್ತಾಪ ಮಾಡಿರುತ್ತಾರೆ.

ಹಾಗೆಯೇ ಕಾಂಗ್ರೆಸ್ (ಐ) ಪಕ್ಷ ಹಾಗೂ ಕರ್ನಾಟಕ ಕಾಂಗ್ರೆಸ್ ಪಕ್ಷಗಳ ಕುರಿತಾಗಿ ಸದನದಲ್ಲಿ ಮಂಡಿಸಿದ್ದ ಅವಿಶ್ವಾಸ ನಿರ್ಣಯ ಗೊತ್ತುವಳಿ ಮೇಲೆ ಈ ಪಕ್ಷಗಳು ತಾಳಿದ ನಿಲುವನ್ನು ಸದನದ